ಅವರೊಡನೆ ಸಂಜೆ ಆರರವರೆಗೆ ಕಲಿಕೆ, ಅಭ್ಯಾಸ, ಓದು ಸಾಗುತ್ತಿತ್ತು. ಹೀಗೆ ಸಿದ್ಧವಾಗಿದ್ದ ಆ ಹಾದಿಯಲ್ಲಿ ನಾನೂ ಸೇರಿಕೊಂಡೆನಷ್ಟೇ. ಹಾಗೆ ಅಕ್ಕಂದಿರು ದಾರಿಯನ್ನು ಮಾಡಿಕೊಟ್ಟದ್ದರಿಂದ ನಾನು ಈ ಕ್ಷೇತ್ರದಲ್ಲಿ ಇಷ್ಟೆಲ್ಲ ಕೆಲಸ ಮಾಡಲು ಸಾಧ್ಯವಾಯಿತು. ಮಣಿಪುರಿ ನೃತ್ಯ ಕಲಿಕೆಯ ಹೊರತಾಗಿ ಬೇರೇನೂ ಮಾಡಲಿಲ್ಲ ನಾನು. ಕಾಲೇಜು ಶಿಕ್ಷಣವನ್ನೂ ಬಹಳ ಕಷ್ಟಪಟ್ಟು ಮಾಡಿ ಎಂ.ಎ. ಪದವಿ ಪಡೆದೆ. ಮನೆಯಲ್ಲಿ ಬೆಳಿಗ್ಗೆ ನೃತ್ಯ ಅಭ್ಯಾಸ ಮಾಡಿ ದಣಿದು ನಂತರ ಕಾಲೇಜಿಗೆ ಹೋದರೆ, ಅಲ್ಲಿ ಸ್ವಲ್ಪ ಹೊತ್ತಿಗೇ ಕಣ್ಣಲ್ಲಿ ನಿದ್ದೆ ಸುರಿಯುತ್ತಿತ್ತು. ಸಂಜೆ ಮತ್ತೆ ನೃತ್ಯಾಭ್ಯಾಸ. ಗುರುಕುಲ ಪದ್ಧತಿಯಲ್ಲಿ ನಮ್ಮ ನೃತ್ಯಾಭ್ಯಾಸ ನಡೆದಿತ್ತು. ನಾನು ಹೀಗೆ ಗಳಿಸಿದ ಜ್ಞಾನವನ್ನು ಆಧರಿಸಿ ಪಿಎಚ್.ಡಿ. ಮಾಡಬೇಕು ಎಂದು ಹಲವು ಬಾರಿ ಪ್ರಯತ್ನಿಸಿದೆ. ಆದರೆ, ಮಣಿಪುರಕ್ಕೆ ತೆರಳಿ ಕ್ಷೇತ್ರಾಧ್ಯಯನ ಮಾಡುವುದು, ಓದುವುದು, ನೃತ್ಯ ಕಲಿಯುವ, ಕಲಿಸುವ ಕೆಲಸಗಳ ನಡುವೆ ನಾನು ಪಡೆದ ಜ್ಞಾನವನ್ನು ಔಪಚಾರಿಕ ಪದವಿ ಪಡೆಯುವ ಸಲುವಾಗಿ ಬಳಸಿಕೊಳ್ಳಲು ಪುರುಸೊತ್ತೇ ಆಗಲಿಲ್ಲ.

ಅಕ್ಕಂದಿರು ಮದುವೆಯಾಗಿ ಸಂಸಾರವಂದಿಗರಾದ ಮೇಲೆ ಹೆಚ್ಚಿನ ಅಧ್ಯಯನ, ದಾಖಲೀಕರಣದ ಕೆಲಸಗಳು ನನ್ನೊಬ್ಬಳ ಹೆಗಲ ಮೇಲೆ ಬಿತ್ತು. ಹಾಗಾಗಿ ಮದುವೆಯಾಗುವ ಬಗ್ಗೆಯೂ ನನಗೆ ಯೋಚಿಸಲು ಪುರುಸೊತ್ತಾಗಲಿಲ್ಲ.

ಈಗ ನೀವು ಇತರ ಆಸಕ್ತಿಗಳೇನು ಎಂದು ಪ್ರಶ್ನಿಸಿದರೆ, ಏನೂ ಇಲ್ಲ ಎನ್ನುವುದೇ ಉತ್ತರ. ಸಿನಿಮಾ ನೋಡಿಲ್ಲ. ಆಟವಾಡಿಲ್ಲ. ಬಾಲ್ಯದ ಸ್ನೇಹಿತರಿಲ್ಲ. ನನಗೆ ಅಂಥ ಅವಕಾಶಗಳು ದೊರೆಯುತ್ತಿರಲಿಲ್ಲ. ಅಪ್ಪ ಮತ್ತು ನನ್ನ ದೊಡ್ಡಕ್ಕನ ಗಂಡ (ಸುಶೀಲ್ ಜವೇರಿ) ತುಂಬಾ ಕಟ್ಟುನಿಟ್ಟಿನ ವ್ಯಕ್ತಿಗಳಾಗಿದ್ದರು. ಮಣಿಪುರಿ ನೃತ್ಯದ ಕೆಲಸ ಮಾಡಲು ಎಲ್ಲ ಸೌಕರ್ಯಗಳನ್ನು ಅವರು ಕಲ್ಪಿಸುತ್ತಿದ್ದರು. ಆದರೆ, ನನ್ನ ದಾರಿಯಿಂದ ಹೊರಗೆ ನೋಡಲು ಅವಕಾಶ ಕೊಡುತ್ತಿರಲಿಲ್ಲ. ಅವರು ಕಲಿಸಿದ ಶಿಸ್ತು ಇಂದಿಗೂ ನನ್ನಲ್ಲಿದೆ. ಅದೇ ಶಿಸ್ತಿನಲ್ಲಿ ಬದುಕು ಸಾಗಿಸಿದ್ದರಿಂದ ಈ ಎಲ್ಲ ಕೆಲಸಗಳನ್ನು ಮಾಡುವುದು ಸುಲಭವಾಯಿತು. ಈಗ ಹಿಂತಿರುಗಿ ನೋಡಿದಾಗ ಅಷ್ಟೆಲ್ಲ ಓಡಾಡಿದ್ದು ನಾನೇನಾ ಎಂದು ಅಚ್ಚರಿಯಾಗುತ್ತದೆ. ಆದರೆ, ನಾನು ಒಳ್ಳೆಯ ಅಲಂಕಾರ, ಆಭರಣಗಳನ್ನು ಇಷ್ಟಪಡುತ್ತೇನೆ. ನೋಡಿ, ಇದು ಮಣಿಪುರಿ ಶೈಲಿಯ ಸರ... ಕಿವಿಯೋಲೆ, ಹೂವು ಮುಂತಾದವುಗಳ ಬಗ್ಗೆ ಬಹಳ ಆಸಕ್ತಿಯಿಂದ ಗಮನಿಸುತ್ತೇನೆ. ನಾನು ಗುಜರಾತಿ ಮಹಿಳೆಯಲ್ವಾ... ಮುತ್ತುಗಳೆಂದರೆ ತುಂಬಾ ಇಷ್ಟ. ವಜ್ರವೆಂದರೆ ಅಷ್ಟಕ್ಕಷ್ಟೆ. ಚಿನ್ನದ ಆಭರಣವನ್ನೂ ಧರಿಸುತ್ತೇನೆ. ಈಗಿನ ತಲೆಮಾರಿನವರವರಿಗೆ ಇವೆಲ್ಲ ಯಾಕೆ ಅನಾಸಕ್ತಿಯ ವಿಷಯವಾಗಿವೆ ಎಂದೇ ಅರ್ಥವಾಗುವುದಿಲ್ಲ...

◆ **ನೀವು ಜಗತ್ತಿನಾದ್ಯಂದ ಮಣಿಪುರಿ ನೃತ್ಯ ಪ್ರದರ್ಶನ ನೀಡಿದ್ದೀರಿ. ಆ ನೆನಪುಗಳನ್ನು ಹಂಚಿಕೊಳ್ಳುವಿರಾ?**

ನಾನು 1958ರಲ್ಲಿ ಮಣಿಪುರದ ಗೋವಿಂದಜೀ ಮಹಾದೇವಾಲಯದಲ್ಲಿ ನೃತ್ಯ ಪ್ರದರ್ಶನ ನೀಡಿದ ಬಳಿಕ ನಿರಂತರವಾಗಿ ನರ್ತಿಸುತ್ತಲೇ ಇದ್ದೇನೆ. ನೃತ್ಯ ನಿರ್ದೇಶನ, ಅಧ್ಯಯನ, ಬೋಧನೆ ಮುಂತಾದ ಕೆಲಸಗಳ ಜೊತೆಗೆ ಭಾರತದಾದ್ಯಂತ ಮತ್ತು ವಿದೇಶಗಳಲ್ಲಿ ನೃತ್ಯಪ್ರದರ್ಶನ ನೀಡಿದ್ದೇನೆ. ಸುಮಾರು 40 ವರ್ಷಗಳ ಹಿಂದೆ ನೃತ್ಯಪ್ರದರ್ಶನಕ್ಕೆ ತೆರಳುವುದೆಂದರೆ ಅದು ಒಂದೆರಡು ದಿನಗಳ ಟ್ರಿಪ್ ಆಗಿರಲಿಲ್ಲ. ಹತ್ತಾರು ಪ್ರದರ್ಶನಗಳ ಅವಕಾಶವನ್ನು ಹೊಂದಾಣಿಕೆ ಮಾಡಿಕೊಂಡು, ಪೂರ್ವತಯಾರಿಯೊಂದಿಗೆ ಹೋಗುತ್ತಿದ್ದೆವು. ಹತ್ತಾರು ದಿನಗಳ ಪ್ರದರ್ಶನ ನೀಡಿ ಮರಳುತ್ತಿದ್ದೆವು. ಸರ್ಕಾರಿ ಪ್ರಾಯೋಜಿತ ಪ್ರವಾಸ, ಖಾಸಗಿ ಪ್ರವಾಸ, ಸಂಸ್ಥೆಗಳ ಆಹ್ವಾನದ ಮೇರೆಗೆ ಬರೋಬ್ಬರಿ 60 ವರ್ಷಗಳ ಕಾಲ ಪ್ರದರ್ಶನ ನೀಡಿದ್ದೇನೆ. ನಾವು ಕಲಿತ ನೃತ್ಯವನ್ನೇ ಮತ್ತೆ ಮತ್ತೆ ಪ್ರದರ್ಶಿಸಿದರೂ ಬೇಸರ ಬರುವುದಿಲ್ಲ. ಪ್ರೇಕ್ಷಕರ ಪ್ರತಿಕ್ರಿಯೆಯೇ ಕಲಾವಿದರಿಗೆ ಸ್ಫೂರ್ತಿ. ಪ್ಯಾರಿಸ್‌ನಲ್ಲಿ ಪ್ರೇಕ್ಷಕರು ಕಲಾಪ್ರಜ್ಞೆ ಮತ್ತು ಸೌಂದರ್ಯ ಪ್ರಜ್ಞೆ ಇರುವವರು. ನಮ್ಮ ನೃತ್ಯರೂಪಕದಲ್ಲಿ ಕ್ಷಿಪ್ರಗತಿಯ ತಾಂಡವ, ವಿಲಂಬಿತ ಲಾಸ್ಯ ಮುಂತಾಗಿ ಅನೇಕ ರೀತಿಯ ನೃತ್ಯಗಳನ್ನು ಸಂಯೋಜಿಸಿದ್ದೆವು. ಲಾಸ್ಯವಿಭಾಗದಲ್ಲಿ ನಾನು ಏಕವ್ಯಕ್ತಿ ಪ್ರದರ್ಶನ ನೀಡಿದ್ದೆ. ಪ್ರದರ್ಶನ ಮುಗಿದ ಬಳಿಕ ಅನೇಕ ಪ್ರೇಕ್ಷಕರು ಬಂದು ವಿಲಂಬಗತಿಯ ಲಾಸ್ಯವನ್ನೇ ಇಷ್ಟಪಟ್ಟಿದ್ದು ನೋಡಿ ನಾನು ಅಚ್ಚರಿಪಟ್ಟಿದ್ದೇನೆ.